ಪ್ರತಿ ವರ್ಷ ಭತ್ತ, ರಾಗಿ, ಕಾಳುಕಡಿ, ಕುಂಬಳಕಾಯಿ ಕೊಡ್ತಾ ಬಂದಿದ್ದೇವೆ. ನಮ್ಮ ಸಂಕ್ರಾತಿಯ ಫಸಲಿನಲ್ಲಿ ದೇವರಿಗೂ ಪಾಲಿದೆ. ಅದಕ್ಕೆಂದೇ ಊರಿಂದ ಯಾರಾದ್ರು ತೀರ್ಥಸ್ಥಳಕ್ಕೆ ಹೊರಟ್ರೆ ಹುಂಡಿಗೆ ಹಾಕಿ ಅಂತ ಕಾಣಿಕೆ ಕೊಟ್ಟು ಕಳಿಸ್ತೀವಿ. ದೇವರಿಗೆ ನಮ್ಮ ಕಾಣಿಕೆ ಸೇರಬೇಕು. ಸರ್ಕಾರದ್ದೂ ಮತ್ತೊಬ್ಬರದ್ದೂ ಆಗಲ್ಲ. ಅದಕ್ಕೆ ಹಣ ಬೇಡ ಅಂದ್ವಿ. ಬೇಜಾರ್ ಮಾಡ್ಕೊಬೇಡಿ. ದೇವರು ನಿಮ್ಗೆ ಒಳ್ಳೇದು ಮಾಡ್ಲಿ' ಎಂದರು. ಎಲ್ಲರೂ ಗಂಗಾ ಮಾತೆಗೆ ಗಂಧದ ಕಡ್ಡಿ, ದೀಪ ಹಚ್ಚಿ ಆರತಿ ಬೆಳಗಿದರು. ನಾವು ಅವರೊಡನೆ ನದಿಗೆ ನಮಸ್ಕರಿಸಿ, ಚಳಿಯಲ್ಲೂ ನೀರನ್ನ ತಲೆ ಮೇಲೆ ಚಿಮುಕಿಸಿಕೊಂಡೆವು. ನಾವಿಬ್ಬರು ಚಳಿಯಾಗದಂತೆ ತಲೆಗೆ ಟೋಪಿ, ಮೈಗೆ ಸ್ವೆಟರ್ ಧರಿಸಿದ್ದೆವು. ಅವರೆಲ್ಲಾ ಚಳಿಯ ಹೊಡೆತಕ್ಕೆ ನಡುಗುತ್ತಿರುವುದು ಕಾಣುತ್ತಿತ್ತು. ಮೇಘಸ್ಫೋಟದಿಂದ ಗಂಗೆ ಉಕ್ಕಿ ಹರಿಯುತ್ತಿದ್ದಳು. ಪೂಜೆ ಮುಗಿಸಿ ಪುನಃ ಆಶ್ರಮದತ್ತ ಹೆಜ್ಜೆ ಹಾಕಿದೆವು. ದಾರಿಯ ಪಕ್ಕ ಒಲೆಯಲ್ಲಿ ಚಹ ಮಾಡುತ್ತಿದ್ದ ಅಂಗಡಿ ಕಾಣಿಸಿತು. ನಾನು, ನಟೇಶ್ ಮಣ್ಣಿನ ಕುಡಿಕೆಯಲ್ಲಿ ಚಹಾ ಕುಡಿದು ದೇಹ ಬಿಸಿ ಮಾಡಿಕೊಂಡೆವು. ಶಿವಪ್ಪ ಹಣ ಕೊಡಲು ಮುಂದಾದರು. ನಟೇಶ್, 'ಈ ಟೀಗೆ ನಾನು ಕೊಡ್ತೀನಿ. ಇದು ಸರ್ಕಾರದ ಹಣ ಅಲ್ಲ, ವೈಯುಕ್ತಿಕ ಹಣ. ನೀವು ಸುಮ್ಮನಿರಿ' ಎಂದು ಕೊಂಚ ಗಡುಸಾಗಿ ಹೇಳಿ ಹಣ ಪಾವತಿಸಿದಾಗ ಶಿವಪ್ಪ ಸುಮ್ಮನಾದರು. ಎಲ್ಲರ ಜೊತೆ ಆಶ್ರಮಕ್ಕೆ ತಲುಪಿದಾಗ ನಟೇಶ್, 'ಎಲ್ಲಾ ಸರಿ, ಈ ಬಾರಿ ಕೇದಾರನಾಥನ ದರ್ಶನವಾಗಲಿಲ್ಲ. ಮುಂದಿನ ವರ್ಷ ಮತ್ತೆ ಬರ್ತೀರಾ?' ಎಂದು ಪ್ರಶ್ನಿಸಿದರು.

'5 ಕುರಿ ಮರಿ ಸಾಕಿದ್ದೇವೆ. ಇನ್ನಾರು ತಿಂಗಳಿಗೆ ಮಾರಿದ್ರೆ ಐವತ್ತು ಸಾವಿರ ಸಿಗುತ್ತೆ. ಭಗವಂತ ಕರಸ್ಕೊಂಡ್ರೆ ಬಂದು ದರ್ಶನ ಮಾಡಿಕೊಂಡು ಹೋಗ್ತೀವಿ' ಎಂದು ಶಿವಪ್ಪ ಹೇಳಿದಾಗ ನಮಗರಿವಿಲ್ಲದಂತೆ ಎರಡೂ ಕೈಗಳು ಎದೆಯ ಭಾಗದವರೆಗೆ ಬಂದು ಜೋಡಿಸಿದವು. ಶಿರಬಾಗಿ ನಮಸ್ಕರಿಸಿದೆವು. ನಮ್ಮಿಬ್ಬರ ತಲೆಯ ಅಹಂ ಕಡಿಮೆಯಾಗಿ ಶರೀರವೆಲ್ಲಾ ಹಗುರವೆನಿಸಿ, ಕ್ಯಾಂಪ್ ಕಡೆ ಹೆಜ್ಜೆ ಹಾಕಿದೆವು. ಸನ್ಯಾಸಿ ಮತ್ತು ಉದ್ಯಮಿ ಹಣ ಪಡೆದರೂ ರೈತರು ನಿರಾಕರಿಸಿದ್ದು ನಮ್ಮ ಊಹೆಗೆ ನಿಲುಕದ ವಿಷಯವಾಗಿತ್ತು.

ಮೊದಲ ಎಂಟ್ಹತ್ತು ದಿನ ನಮಗೆಲ್ಲಾ ಆತಂಕದ ದಿನಗಳಾಗಿದ್ದವು. ಆತಂಕದಿಂದ ಕುಗ್ಗಿದ್ದ, ದೈಹಿಕವಾಗಿ ಬಳಲಿ ಮಾನಸಿಕ ಸ್ಥೈರ್ಯ ಕುಂದಿದ್ದವರಿಗೆ ಅಗತ್ಯ ನೆರವು ಒದಗಿಸುತ್ತಿದ್ದೆವು. ತಡರಾತ್ರಿ ಯಾರಾದರೂ ಹುಡುಕಿಕೊಂಡು ಬಂದರೂ ಅವರಿಗೆ ತೊಂದರೆಯಾಗಬಾರದೆಂದು ರಾತ್ರಿ ಪಾಳಿಯಲ್ಲೂ ಕ್ಯಾಂಪ್‌ನಲ್ಲಿ ಬಿರುಸಿನಿಂದ ಕೆಲಸ ಮಾಡುತ್ತಿದ್ದೆವು. ಪ್ರತಿದಿನ ಸಂಘಸಂಸ್ಥೆಗಳು ಉಚಿತವಾಗಿ ನೀಡುತ್ತಿದ್ದ ಪೂರಿ, ಚೆನ್ನಾ ಬತುರಾ, ರೋಟಿ ದಾಸೋಹ ಸಾಂಗವಾಗಿ ನಡೆಯುತ್ತಿತ್ತು. ಟೀ-ಕಾಫಿ, ಬಿಸ್ಕೇಟ್ ಪೊಟ್ಟಣಗಳಿಗೆ ಬರವಿರಲಿಲ್ಲ. ರಾತ್ರಿ ಹೊತ್ತು ಹರಿದ್ವಾರದಲ್ಲಿ ಊಟ ಮಾಡಿದೆವು. ಒಮ್ಮೆ ಮಾತ್ರ ನಟೇಶ್ ಜೊತೆ ಹಣ ನೀಡಿ ಲಸ್ಸಿ ಕುಡಿದೆ. ಗಂಗಾ ನದಿಯನ್ನು ತೂಗು ಸೇತುವೆ ಮೇಲೆ ಹಾದು ವಾಪಸ್ ಬರುತ್ತಿರುವಾಗ ಒಬ್ಬ ಇಂಗ್ಲೀಷ್‌ನಲ್ಲಿ 'ಇಲ್ಲಿ ಸಿಸಿಡಿ ಎಲ್ಲಿದೆ?' ಎಂದು ಕೇಳಿದ. ನಾವಿಬ್ಬರೂ ಪರಸ್ಪರ ಮುಖ ನೋಡಿಕೊಂಡೆವು. ನಮಗೆ ಅರ್ಥ ಆಗಿಲ್ಲವೆಂದು ತಿಳಿದ ಆತ, 'ಕೆಫೆ ಕಾಫಿ ಡೇ' ಎಂದ. ಕಳೆದ ಎರಡು ವರ್ಷದ ಹಿಂದೆ ಆತ್ಮಹತ್ಯೆ ಮಾಡಿಕೊಂಡ ಕನ್ನಡಿಗ ಉದ್ಯಮಿ ಸಿದ್ದಾರ್ಥ ಹೆಗಡೆ ಸ್ಥಾಪಿಸಿದ್ದ ಕಾಫಿ ರೆಸ್ಟೊರೆಂಟ್ ಚೈನ್. ಅದು ಹೃಷಿಕೇಶಕ್ಕೂ ಚಾಚಿಕೊಂಡಿತ್ತು. ನಾವು ಲಸ್ಸಿ ಕುಡಿದ ಅಂಗಡಿಯ ಪಕ್ಕದಲ್ಲೇ ಸಿಸಿಡಿ ಇತ್ತು. ಆತನಿಗೆ ದಾರಿ ತೋರಿಸಿದೆವು. ಬೇರೆ ಬೇರೆ ರಾಜ್ಯಗಳಿಂದ ಪರಿಹಾರ ಸಾಮಗ್ರಿಗಳನ್ನು ಹೊತ್ತು ತಂದ ಲಾರಿಗಳು ಹೃಷಿಕೇಶ ನಗರದ ರಸ್ತೆಯ ಇಕ್ಕೆಲಗಳಲ್ಲೂ ನಿಂತಿದ್ದವು. ಅಂದಿನ ಮಂಡ್ಯದ ಜಿಲ್ಲಾಧಿಕಾರಿ ಕೃಷ್ಣಯ್ಯನವರು ಒಂದು ಲಾರಿ ಪೂರ್ತಿ ಅಕ್ಕಿ ಕಳುಹಿಸಿದ್ದರು. ಮೇಘಸ್ಫೋಟದಿಂದ ಸ್ಥಳೀಯ ಜನರಿಗೆ ಆದ ಹಾನಿ ಅತ್ಯಲ್ಪ. ಪರ ಊರಿನಿಂದ ಬಂದ ಯಾತ್ರಿಕರಿಗೆ ಆದ ಹಾನಿಯೇ ಹೆಚ್ಚು. ಮೋಡಗಳ ಗರ್ಜನೆ-ಸ್ಫೋಟದಿಂದ ಉಂಟಾದ ದುರಂತದಲ್ಲಿ ಸರ್ಕಾರಿ ವರದಿಯಂತೆ ಸತ್ತವರ ಸಂಖ್ಯೆ 5700ಕ್ಕೂ ಹೆಚ್ಚು. ನಮ್ಮ ರಾಜ್ಯದಿಂದ ಯಾತ್ರೆಗೆಂದು ತೆರಳಿದ್ದ ಎಲ್ಲರೂ ಹಿಂತಿರುಗಿದರು. ಆದರೆ, ಮದ್ದೂರಿನ ಹನ್ನೊಂದು ಜನ ಯಾತ್ರಿಕರನ್ನು ಪತ್ತೆ ಹಚ್ಚಲಾಗಲಿಲ್ಲ. ಅವರನ್ನು ಕುಟುಂಬಸ್ಥರು ಮತ್ತೊಮ್ಮೆ ನೋಡುವ ಅವಕಾಶದಿಂದ ವಂಚಿತರಾದರು ಎಂಬ ಬೇಸರ ನನ್ನನ್ನು ಇವತ್ತಿಗೂ ಕಾಡುತ್ತಿದೆ. ಬೆಟ್ಟ ಗುಡ್ಡ ಕಣಿವೆಗಳಲ್ಲಿ ಸಿಲುಕಿರುವವರ